ವಿಷಯ :- ಧಾರವಾಡ ಪ್ರಮುಖ ರಸ್ತೆಗಳಿಗೆ ಹೆಸರುಗಳ ನಾಮಕರಣದ ವಿವರ.

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 2346 (711)

ಶ್ರೀ ಚಂದ್ರಕಾಂತ ಬೆಲ್ಲದ (ಧಾರವಾಡ) :- ಮಾನ್ಯ ನಗರಾಭಿವೃದ್ಧಿ, ಕಾಡಾ ಮತ್ತು ಹೈದ್ರಾಬಾದ್-ಕರ್ನಾಟಕ ಅಭಿವೃದ್ಧಿ ಮಂಡಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯ ವಿಟ್ಟು ಉತ್ತರಿಸುವರೇ?

ಅ) ಧಾರವಾಡ ಪ್ರಮುಖ ರಸ್ತೆಗಳಿಗೆ ಯಾವ ಯಾವ ಹೆಸರು ನಾಮಕರಣ ಮಾಡ ಲಾಗಿದೆ, ಅವುಗಳ ಸರಹದ್ದು (ರಸ್ತೆಮಿತಿ) ಪೂರ್ಣ ವಿವರ ಒದಗಿಸುವುದು.

ಆ) ರಸ್ತೆಗಳು ಹಾಗೂ ವರ್ತುಲಗಳ ಬಗ್ಗೆ ನಾಮಕರಣ ಮಾಡಲು ಜನತೆಯಿಂದ ಹೆಸರುಗಳು ಮಹಾನಗರಸಭೆಗೆ ಬಂದಿದ್ದರೆ, ಹಾಗಿದ್ದಲ್ಲಿ ವಿವರ ನೀಡುವುದು?

ಶ್ರೀ ವೈಜನಾಥ ಪಾಟೀಲ್ (ನಗರಾಭಿವೃದ್ಧಿ, ಕಾಡಾ ಮತ್ತು ಹೈದ್ರಾಬಾದ್-ಕರ್ನಾಟಕ ಅಭಿವೃದ್ಧಿ ಮಂಡಳಿ ಸಚಿವರು) :-

ಅ) 1) **ಶ್ರೀ ಆರ್ಟಾಳ ರುದ್ರಗೌಡ ರಸ್ತೆ**

ಕರ್ನಾಟಕ ಕಾಲೇಜು ವರ್ತುಳದಿಂದ ವಿಶ್ವವಿದ್ಯಾಲಯಕ್ಕೆ ಹೊರಳುವ ರಸ್ತೆಯ ವರ್ತುಳದವರೆಗೆ

2) **ವೀರರಾಣಿ ಕಿತ್ತೂರು ಚೆನ್ನಮ್ಮ ರಸ್ತೆ**

ಆಲೂರು ವೆಂಕಟರಾವ್ ಸರ್ಕಲ್‌ನಿಂದ ಬೆಳಗಾಂ ಟೋಲ್‌ಗೇಟ್ ವರೆಗೆ

3) **ಡಾ. ಬಾಬಾಸಾಹೇಬ ಆಂಬೇಡ್ಕರ್ ರಸ್ತೆ**

ಜನತಾ ಕಾಲೇಜಿನಿಂದ ರಾಷ್ಟ್ರೀಯಹೆದ್ದಾರಿ ಮೂಲಕ ಹಾಯ್ದು ಡಾ. ಬಾಬಾ ಸಾಹೇಬ ಅಂಬೇಡ್ಕರ್ ವರ್ತುಳದ ವರೆಗೆ

4) **ಪ್ರೊ. ಸಾ. ಸಿ. ಮಾಳವಾಡ ರಸ್ತೆ**

ಅತ್ತಿಕೊಳ್ಳ ರೇಲ್ವೆಗೇಟ್ ನಿಂದ ಕರ್ನಾಟಕ ವಿಶ್ವವಿದ್ಯಾಲಯದ ವರೆಗಿನ ರಸ್ತೆ

5) **ಶ್ರೀ ರಂಗ ರಸ್ತೆ**

ಸಪ್ತಾಪುರ ಡಾ.ಆರ್. ಸಿ. ಹಿರೇಪುರ ಇವರ ಮನೆಯಿಂದ ಕೆಲಗೇರಿಗೆ ಹೋಗುವ ಮಾರ್ಗ

6) **ಶ್ರೀ ಸರದಾರ ಭಗತಸಿಂಗ್ ಮಾರ್ಗ**

ಲೈನ್ ಬಜಾರದಿಂದ ಟಿಕಾರ್ ರಸ್ತೆಯ ವರೆಗಿನ ವಿವೇಕಾನಂದ ಸರ್ಕಲ್‌ವರೆಗೆ

ಆ) ಈ ಕೆಳಗೆ ಕಾಣಿಸಿದವರಿಂದ ರಸ್ತೆ ಹಾಗೂ ವರ್ತುಲಗಳಿಗೆ ನಾಮಕರಣ ಮಾಡುವ ಕುರಿತು ಮನವಿಗಳು ಬಂದಿರುತ್ತವೆ.

1) ಎಸ್. ಕೆ. ನಗರ ಅಥವಾ ಎನ್. ಕೆ. ರಸ್ತೆ

ಮಹೀಷಿ ರಸ್ತೆ ಶ್ರೀಸಾಂಬ್ರಾಣಿ ಇವರ ಮನೆಯಿಂದ ಬಾಗಲಕೋಟಿ ಪೆಟ್ರೋಲ್ ಬಂಕ್ ಎನ್. ಕೆ. ನಗರ ಅಥವಾ ಎನ್. ಕೆ. ರಸ್ತೆ ಎಂದು ನಾಮಕರಣ ಮಾಡಲು ಶ್ರೀ ಲಕ್ಷ್ಮಣ ವಿ. ಜೋಶಿ ಎಂಬುವವರು ಮನವಿ ಸಲ್ಲಿಸಿರುತ್ತಾರೆ.

2) ಕಿಟಲ- ಮಾರ್ಗ

ಚುಬ್ಲಿ ಸರ್ಕಲ್‌ನಿಂದ ಹನುಮಂತ ದೇವರಗುಡಿ ವರೆಗಿನ ರಸ್ತೆಗೆ ಕಿಟಲ ಮಾರ್ಗ ಎಂದು ನಾಮಕರಣ ಮಾಡಲು ಶ್ರೀ ದೇಸಾಯಿ ಗೌಡ ಎಸ್. ಪಾಟೀಲ ಅವರು ಮನವಿ ಸಲ್ಲಿಸಿರುತ್ತಾರೆ.

3) ಮಾನೇಶ್ವರ ಗುಡಿ ಓಣಿ

ಮಾನೇಶ್ವರ ಧರ್ಮನಿಧಿ ಸಂಸ್ಥೆಯಿಂದ ತಳವಾರಗಳಲ್ಲಿ ಮದಾರಮಡ್ಡಿ ಓಣಿಗೆ ಮಾನೇಶ್ವರಗುಡಿ ಓಣಿ ಎಂಬ ನಾಮಕರಣ ಮಾಡಲು ಮಾನೇಶ್ವರ ಧರ್ಮ ನಿಧಿ ಸಂಸ್ಥೆ ಅವರು ಮನವಿ ಸಲ್ಲಿಸಿರುತ್ತಾರೆ.

4) ಶಾರದಾ ನಗರ

ಶಾರದಾ ನಗರ ಹಿತರಕ್ಷಕ ಸಂಘದಿಂದ ಸರ್ವೆ ನಂ.7ಬ ಎಲ್. ಕೆ. (ಲಕಮನ ಹಳ್ಳಿ) ಬಡಾವಣೆಗೆ 'ಶಾರದಾ ನಗರ' ಎಂದು ನಾಮಕರಣ ಮಾಡಲು ಮನವಿ ಸಲ್ಲಿಸಿರುತ್ತಾರೆ.

5) ಪ್ರೊ. ಸ. ಶಿ. ಭೂಸನೂರ ಮಠ ರಸ್ತೆ

ಕೆ. ಸಿ. ಪಾರ್ಕ್ ಪೋಸ್ಟ್ ಆಫೀಸ್‌ನಿಂದಹೆಳ್ಯಾಳ ಸಾಕಾ ಮಾರ್ಗವಾಗಿ ದೂರ ದರ್ಶನ ಕೇಂದ್ರ ಮುಂದೆ ಹಾಯ್ದು ಜಯನಗರ, ಸಪ್ತಾಪುರ ವರೆಗಿನ ಹೆಳ್ಯಾಳ ರಸ್ತೆಗೆ 'ಪ್ರೊ. ನ. ಶಿ. ಭೂಸನೂರ ಮಠ ರಸ್ತೆ' ಎಂದು ನಾಮಕರಣ ಮಾಡಲು ಶ್ರೀ ಶಂಕರ ಕುಂಬಿ ರವರು ಮನವಿ ಸಲ್ಲಿಸಿರುತ್ತಾರೆ.

6) ಮಹಾಲಕ್ಷ್ಮಿ ನಗರ

ರಿ. ಸ. ನಂ. 10 ಜಿ : ಡಿಡಿ ವಸತಿ ವಿನ್ಯಾಸಕ್ಕೆ ಮಹಾಲಕ್ಷ್ಮಿ ನಗರ ಎಂದು ನಾಮಕರಣ ಮಾಡಲು ಶ್ರೀಮತಿ ವಿಜಯಲಕ್ಷ್ಮಿ ಲೂತಿ ಮಠ ಇವರು ಮನವಿ ಸಲ್ಲಿಸಿರುತ್ತಾರೆ.

ವಿಷಯ :- ಧಾರವಾಡ ಮಹಾನಗರದಲ್ಲಿ ಮಾರ್ಕೆಟ್‌ಗಳಿಗಾಗಿ ಜಾಗ ಕಾಯ್ದಿರಿಸಿರುವ ವಿವರ.

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 2347 (631)

ಶ್ರೀ ಚಂದ್ರಕಾಂತ ಬೆಲ್ಲದ (ಧಾರವಾಡ) :- ಮಾನ್ಯ ನಗರಾಭಿವೃದ್ಧಿ, ಕಾಡಾ ಮತ್ತು ಹೈದ್ರಾಬಾದ್-ಕರ್ನಾಟಕ ಅಭಿವೃದ್ಧಿ ಮಂಡಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?